ಕೂಡ ವಾಟ್ಸ್‌ಆ್ಯಪ್‌ಗೆ ಬಂದಿತು. ಲಾಂಗ್ ಶಾಟ್‌ನಲ್ಲಿ ತೆಗೆದಿದ್ದರಾದ್ದರಿಂದ ಪ್ಲಕಾರ್ಡ್‌ಗಳಲ್ಲಿ ಬರೆದಿರುವುದು ಏನೆಂದು ಅರ್ಥವಾಗಲಿಲ್ಲ.

ಇನ್ನೊಂದು ವಿಡಿಯೊ ತುಣುಕಿನಲ್ಲಿ, 'ಸಾಮಾಜಿಕ ಹೊಣೆಗೇಡಿತನಕ್ಕೆ ಸಂಪಾದಕರನ್ನೂ, ಕಲಾವಿದೆಯನ್ನೂ ಬಂಧಿಸಿ, ಅವರು ಸಾರ್ವಜನಿಕವಾಗಿ ಕ್ಷಮೆ ಕೇಳುವಂತೆ ಮಾಡಬೇಕು' ಎಂದು ಒಕ್ಕೊರಲಿನಿಂದ ಕೂಗಿ ಹೇಳಲಾಗಿತ್ತು.

ಇಷ್ಟೆಲ್ಲ ನಡೆಯುತ್ತಿದ್ದರೂ ತಾನಿನ್ನೂ ಯಾಕೆ ಹಾಸಿಗೆಯ ಮೇಲೆ ಕೂತೇ ಇದ್ದೇನೆ? ಒಮ್ಮೆ ಪುರವಣಿಯನ್ನು ನೋಡಲೇಬೇಕೆನ್ನಿಸಿ ಹಾಸಿಗೆ ಬಿಟ್ಟು ಎದ್ದಳು. 'ಅಮೃತದಾಯಿನಿಗೆ ಮರ್ಯಾದೆಯ ಸಂಕೋಲೆಯೇಕೆ? ಸೌಂದರ್ಯಕ್ಕಿದೇ ಮಾನದಂಡವೇಕೆ? ಹೆಡ್‌ಲೈನಿನಡಿ ದೊಡ್ಡದಾಗಿ ತನ್ನ ಇಲ್ಲಸ್ಟ್ರೇಷನ್ ಪ್ರಕಟಿಸಿ ಡಿಸೈನ್ ಮಾಡಲಾಗಿತ್ತು. ಪಕ್ಕದಲ್ಲಿ 'ಬ್ರಾ ಕಳಚಿ ಅಭಿಯಾನ' ಎಂಬ ಶೀರ್ಷಿಕೆಯಡಿ ಬರೆದ ನೋಟ್ ಇತ್ತು.

ಸಂಪಾದಕರ ಫೋನ್, 'ಕೊನೇ ಕ್ಷಣದಲ್ಲಿ ಒಂದು ನಿರ್ಧಾರ ತೆಗೆದುಕೊಂಡೆ. ಆದರೆ ಅದು ಇಷ್ಟೊಂದು ವ್ಯಾಪಕವಾಗಿ ಚರ್ಚೆಯಾಗುತ್ತದೆ ಎಂದು ಭಾವಿಸಿರಲೇ ಇಲ್ಲ. ನಮ್ಮ ಪತ್ರಿಕೆಯ ಸರ್ಕ್ಯುಲೇಶನ್ ಈವತ್ತು ದುಪ್ಪಟ್ಟಾಗಿದೆ. ಆದರೆ ವಿಷಯ ಇದಲ್ಲ. ಇದರ ಹಿಂದೆ ನನ್ನ ಒಂದು ಸಣ್ಣ ಸ್ವಾರ್ಥವಿತ್ತು. ಪೇಪರ್ ಓದಿದ ಸ್ವಲ್ಪ ಹೊತ್ತಿನ ನಂತರ ನನ್ನ ಹೆಂಡತಿ ಈವತ್ತು ಬೆಳಗ್ಗೆ ಒಂದು ವಾಕ್ ಹೋಗೋಣ ಎಂದು ನನ್ನನ್ನು ತಾನಾಗೇ ಕರೆದಳು. ಆಕೆ ಹೀಗೆ ಇಷ್ಟು ಬೇಗ ಪರಿವರ್ತನೆಗೊಳ್ಳುತ್ತಾಳೆ ಎಂದುಕೊಂಡಿರಲೇ ಇಲ್ಲ. ಇದಕ್ಕೆಲ್ಲ ಕಾರಣ ನೀವೇ. ನಿಮಗೆ ಥ್ಯಾಂಕ್ಸ್'. 'ಅರೆ ನಾನೇನಂಥದ್ದನ್ನು ಮಾಡಿದೆ ಸರ್?' ಹರಿದ್ವರ್ಣಾ ತಡೆಯಲಾರದೆ ಕೇಳಿಯೇ ಬಿಟ್ಟಳು. 'ಬ್ರೆಸ್ಟ್ ಕ್ಯಾನ್ಸರ್‌ನಿಂದ ಆಕೆ ತನ್ನೆರಡೂ ಸ್ತನಗಳನ್ನು ಆರು ವರ್ಷಗಳ ಹಿಂದೆ ಕಳೆದುಕೊಂಡಳು. ಅವರಿವರ ಮನೆಗೆ ಹೋಗಲಿ, ನಮ್ಮ ಮನೆಯ ಗೇಟಿಗೆ ಬಂದು ಆರಾಮಾಗಿ ಒಂದು ದಿನವೂ ನಿಂತುಕೊಂಡಿದ್ದಿಲ್ಲ.'

ಸಾರ್ಥಕ ಭಾವದೊಂದಿಗೆ ನಿಟ್ಟುಸಿರು ಬಿಟ್ಟು ಗಂಡನೊಂದಿಗೆ ಈ ಸುದ್ದಿಯನ್ನು ಹಂಚಿಕೊಳ್ಳಲು ಎಬ್ಬಿಸಿದಳು. 'ಕಂಗ್ರಾಟ್ಸ್ ಬೇಬ್' ಮಲಗುವ ಮೊದಲೇ ಇ–ಪೇಪರ್ ನೋಡಿದೆ. ಹೀಗೆ ನೀನು ಏನೇ ಮಾಡಿದರೂ ಅದರಲ್ಲಿ ಒಂದು ಹೊಸತನವಿರಬೇಕು, ಬದಲಾವಣೆ ಇರಬೇಕು. ಹಗ್ಗೀ?' ಅಪ್ಪಿಕೊಂಡು ಹಣೆಗೆ ಮುತ್ತಿಟ್ಟ.

'ಪೇಪರ್ ಬಿಲ್' ಬೆಲ್ ಬಡಿದುಕೊಂಡಿತು. ಹರಿದ್ವರ್ಣಾ ಗಂಡನ ತೋಳಿನಿಂದ ಬಿಡಿಸಿಕೊಂಡು ತಲೆದಿಂಬಿನ ಕೆಳಗಿದ್ದ ಬ್ರಾ ಹುಡುಕಹತ್ತಿದಳು.


**ಶ್ರೀದೇವಿ ಕಳಸದ**

ಮುದ್ರಣ ಮತ್ತು ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಸುಮಾರು ದಶಕದ ಕಾಲ ಕಾರ್ಯ ನಿರ್ವಹಿಸಿದ್ದಾರೆ. ಅವರ 'ಹಾಡಾಗದ ಸಾಲುಗಳು' ಕವನ ಸಂಕಲನವನ್ನು ಬೆಂಗಳೂರಿನ 'ಅಂಕಿತ ಪುಸ್ತಕ' ಪ್ರಕಟಿಸಿದೆ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿಯೂ ಪರಿಣತಿ ಇರುವ ಶ್ರೀದೇವಿ ತಮ್ಮ ಅಂತರಂಗದ ಧ್ವನಿಗೆ ಸಾಹಿತ್ಯ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡಿದ್ದಾರೆ.